

# ಎಂದೆಂದೂ ಮುಗಿಯದ ಮನಸಿನ ಲಾಕ್‌ಡೌನ್!

**ಒಂದು ಬರ್ತ್‌ಡೇ ಆಚರಣೆಯ ತಯಾರಿಯ ನೆಪದಲ್ಲಿ ಹೆಣ್ಣಿನ ಬದುಕಿನ ಹಲವು ಮಗ್ಗಲುಗಳನ್ನು ತೆರೆದಿಡುವ ಧ್ವನಿಪೂರ್ಣ ಕಿರುಚಿತ್ರವಿದು.**

■ ಗೌರಿ

ಒಂದು ಕುಟುಂಬದ ಸಡಗರದಲ್ಲಿ ಹೆಣ್ಣಿನ ಪಾತ್ರ ತುಂಬ ದೊಡ್ಡದಿರುತ್ತದೆ. ಆದರೆ ಆ ಸಡಗರದಲ್ಲಿ ಅದರ ಹಿಂದಿರುವ ಹೆಣ್ಣಿಗೆ ದೊಡ್ಡ ಪಾಲು ಸಿಗುತ್ತದೆಯೇ? ಈ ಪ್ರಶ್ನೆ ನಮ್ಮನ್ನು ಕುಟುಂಬ ವ್ಯವಸ್ಥೆಯ ಸಂಕೀರ್ಣ ದಾರಿಗಳಲ್ಲಿ ಕರೆದೊಯ್ಯುತ್ತದೆ, ಪುರುಷಪ್ರಧಾನ ಮನಸ್ಥಿತಿಯ ಗಲ್ಲಿಗಳಲ್ಲಿ ಅಡ್ಡಾಡಿಸುತ್ತದೆ, ಸಂರಕ್ಷಣೆಯ ಮುಖವಾಡ ತೊಟ್ಟ ಶೋಷಣೆಯ ನಾನಾ ರೂಪಗಳನ್ನು ದರ್ಶಿಸುತ್ತದೆ. ಇವೆಲ್ಲವೂ ಸೇರಿಯೇ ಆದ ಕುಟುಂಬ ಎಂಬ ಘಟಕದ ಹುಸಿಪಾವಿತ್ರ್ಯದ ಕುರಿತು ಜಿಗುಪ್ಸೆಯನ್ನೂ ಹುಟ್ಟಿಸುತ್ತದೆ.

ನಟಿ ಶೇಫಾಲಿ ಶಾ ಬರೆದು, ನಿರ್ದೇಶಿಸಿ ನಟಿಸಿರುವ 'ಹ್ಯಾಪಿ ಬರ್ತ್‌ಡೆ ಮಮ್ಮಿ' ಕಿರುಚಿತ್ರವೂ ಇಂಥದ್ದೇ ಒಂದು ಅನುಭವವನ್ನು ಕಟ್ಟಿಕೊಡುತ್ತದೆ. ಕಾವ್ಯಕ್ಕಿರುವ ಕಾಣಿಸಿಯೂ ಕಾಣಿಸದ, ಮೂರ್ತವೂ ಅಮೂರ್ತವೂ ಸೇರಿದ ಹದ ಈ ಕಿರುಚಿತ್ರಕ್ಕಿರುವುದು ವಿಶೇಷ. ಬರೀ ಕಥನದ ನಡಿಗೆಯಲ್ಲಷ್ಟೇ ಅಲ್ಲ, ಅದರ ರೂಪಣೆಯಲ್ಲಿ, ಛಾಯಾಗ್ರಹಣದ ಕಣ್ಣಲ್ಲಿ, ಸಂಕಲನದ ಬೆರಳುಗಳಲ್ಲಿಯೂ ಕಾವ್ಯ ಪರಿಮಳ ಅಂಟಿರುವುದು ಕಾಣಿಸುತ್ತದೆ. ಕಾವ್ಯ ಅಂದಾಕ್ಷಣ ರೊಮ್ಯಾಂಟಿಕ್ ಎಂದಷ್ಟೇ ಅಲ್ಲ, ಅದು ನಮ್ಮೊಳಗೆ ಹುಟ್ಟಿಸುವ ವಿಷಾದವನ್ನೂ ಈ ಕಿರುಚಿತ್ರ ರಿಂಗಣಿಸುವಂತಿದೆ. ಹಾಗೆ ನೋಡಿದರೆ ಈ ಕಿರುಚಿತ್ರ ರೊಮ್ಯಾಂಟಿಕ್ ಜಾಡಿನಲ್ಲಿಯೇ ಅವನ್ನೆಲ್ಲ ತೋರಿಸುತ್ತದೆ.

ಕಥಾನಾಯಕಿ, ಒಂದು ದೊಡ್ಡ ಮಹಲಿನಲ್ಲಿ ಒಂಟಿಯಾಗಿದ್ದಾಳೆ. ಯಾರದೋ ಜನ್ಮದಿನದ ತಯಾರಿಯಲ್ಲಿರುವುದು ಕಾಣಿಸುವಂತಿದೆ. ಅದು ಅವಳ ಅಮ್ಮನ ಜನ್ಮದಿನ. ಅದಕ್ಕಾಗಿ ಎಲ್ಲರನ್ನೂ ಆಹ್ವಾನಿಸಿದ್ದಾಳೆ. ಗಂಡ ಇನ್ನೇನು ಬರಲಿದ್ದಾನೆ ಎಂಬ ನಿರೀಕ್ಷೆಯಲ್ಲಿದ್ದಾಳೆ. ಮಕ್ಕಳಿಗೆ ಕರೆ ಮಾಡಿ ಎಲ್ಲ ಏರ್ಪಾಡು ಮಾಡಿದ್ದಾರೆ. ಅಷ್ಟರಲ್ಲಿ ಲಾಕ್‌ಡೌನ್ ಘೋಷಣೆಯಾಗುತ್ತದೆ. ಅದನ್ನೇ ನೆಪ ಮಾಡಿಕೊಂಡ ಹಾಗೆ ಗಂಡ, ಮಕ್ಕಳು ಎಲ್ಲರೂ ಬರುವುದರಿಂದ ತಪ್ಪಿಸಿಕೊಳ್ಳುತ್ತಾಳೆ. ಅಷ್ಟು ದೊಡ್ಡ ಮನೆಯಲ್ಲಿ ಒಬ್ಬಂಟಿಯಾಗಿ ಕೂರಬೇಕಾಗುತ್ತದೆ.



**ಹೆಸರು:** ಹ್ಯಾಪಿ ಬರ್ತ್‌ಡೇ ಮಮ್ಮಿ
**ನಿರ್ದೇಶನ:** ಶೆಫಾಲಿ ಶಾ
**ನಿರ್ಮಾಣ:** ಸನ್‌ಸ್ಟೈನ್ ಪಿಕ್ಚರ್ಸ್ ಪ್ರೈ. ಲಿ.
**ಸಂಕಲನ:** ಅಂತರಾ ಲಾಹಿರಿ
**ಧ್ವನಿ ವಿನ್ಯಾಸ:** ಗಣೇಶ ಗಂಗಾಧರ್
**ಹಿನ್ನೆಲೆ:** ಪ್ರಸಾದ್ ಎಸ್
**ಛಾಯಾಗ್ರಹಣ:** ಇಶಿತ್ ನರೇನ್
**ನಟನೆ:** ಶೆಫಾಲಿ ಶಾ

ಮಗಳಾಗಿ, ತಾಯಿಯಾಗಿ, ಮಡದಿಯಾಗಿ, ಸಂಬಂಧಿಕಳಾಗಿ ಹಲವು ಪಾತ್ರಗಳನ್ನು ನಿಭಾಯಿಸುತ್ತ, ಎಲ್ಲರ ಖುಷಿಯನ್ನು ಕಾಪಿಡುವ ಮೂಲಸೆಲೆಯಾಗಿರುವ ಅವಳು ಮಾತ್ರ ಒಂಟಿಯಾಗಬೇಕಾಗುತ್ತದೆ. ಕೊನೆಗೆ ಅವಳನ್ನು ಬಿಟ್ಟು ಉಳಿದವರೆಲ್ಲ ಸೇರಿಕೊಂಡು ಬರ್ತ್‌ಡೇ ಪಾರ್ಟಿ ಮಾಡುತ್ತಾರೆ.

ಹೀಗೆ ತನ್ನವರಿಂದ ದೂರವಾದ ಸತ್ವವನ್ನು ಅರಿತುಕೊಳ್ಳುತ್ತಲೇ ಆ ವಿಷಾದದಿಂದಲೇ ಬಿಡುಗಡೆಯನ್ನೂ ಪಡೆದುಕೊಳ್ಳುವ ಗಳಿಗೆ ಈ ಕಿರುಚಿತ್ರದ ಕೇಂದ್ರ. ಕೊನೆಗೆ 'ಡ್ರೈವರ್ ಕಳಿಸುತ್ತೇನೆ. ವಾಪಸ್ ಮನೆಗೆ ಬಂದುಬಿಡು' ಎಂದು ಹೇಳುವ ಗಂಡನಿಗೆ, 'ನನಗೆ ಜ್ವರ ಬಂದಿದೆ' ಎಂದು ಹೇಳುತ್ತಾಳೆ. ಆಗ ಕಂಗಾಲಾಗುವ ಗಂಡ, 'ಓ ಹಾಗಾದರೆ ನೀನು ಐಸೋಲೇಟ್ ಆಗಬೇಕು' ಎಂದೆಲ್ಲ ಬಡಬಡಿಸುತ್ತಾನೆ. ನಾಯಕಿ ಆರಾಮವಾಗಿ ಬಾತ್‌ಟಬ್‌ನಲ್ಲಿ ಒರಗುತ್ತಾಳೆ.

ಹೊರಗಿನಿಂದ ಹೇರಿದ ಲಾಕ್‌ಡೌನ್ ಮತ್ತು ಶತಮಾನಗಳಿಂದ ಮಾನಸಿಕವಾಗಿ ಲಾಕ್‌ಡೌನ್‌ನಲ್ಲಿ ಒಂಟಿಯಾಗಿಯೇ ಬದುಕುತ್ತಿರುವ ಹೆಣ್ಣಿನ ಮನಸ್ಥಿತಿಯನ್ನು ಅಕ್ಕಪಕ್ಕ ಇಟ್ಟು, ವಾಚ್ಯವಾಗಿ ಹೇಳದೇ ನಮಗೆ ಕಾಣಿಸುವ ಪ್ರಯತ್ನ ಧ್ವನಿಪೂರ್ಣವಾಗಿದೆ. ತನ್ನೊಳಗಿನ ಕಾವ್ಯಗುಣದಿಂದಲೇ ಈ ಕಿರುಚಿತ್ರ ಮನಸೊಳಗೆ ಇಳಿಯುತ್ತದೆ, ಕಾಡುತ್ತದೆ. ಉಳಿದೆಲ್ಲ ತಾಂತ್ರಿಕ ಅಂಶಗಳೂ ಅವರ ಕಥನದ ಕೇಂದ್ರಕ್ಕೆ ಹದವಾಗಿಯೂ ಪರಿಣಾಮಕಾರಿಯಾಗಿಯೂ ದುಡಿದಿರುವುದೂ ಗಮನಾರ್ಹ.

ಈ ಕಿರುಚಿತ್ರ ವೀಕ್ಷಣೆಗೆ https://bit.ly/3lhsbMl ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.